23	Raichur	321
24	Shimoga	515
25	Tumkur	1207
26	Udupi	1269
27	Uttara Kannada	1437
	Total	**21656**

31 (5) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯದ ಬಗ್ಗೆ ಕಾದಿರಿಸಿದ ಸ್ಥಳಗಳಾವುವು ,

ಆ) ಈ ದಿಸೆಯಲ್ಲಿ ಆಗಿರುವ ಪ್ರಗತಿ ಎಷ್ಟು ,

ಇ) ಇಲ್ಲಿ ಬಂಡವಾಳ ಹೂಡಿಕೆಗೆ ಮುಂದೆ ಬಂದಿರುವ ಸಂಸ್ಥೆಗಳಾವುವು ,

ಈ) ಈ ಬಗ್ಗೆ ರಾಜ್ಯ ಕೇಂದ್ರ ಸರ್ಕಾರಗಳ ಕೊಡುಗೆಗಳೇನು (ಸಮಗ್ರ ಮಾಹಿತಿ ಒದಗಿಸುವುದು) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಾಗೂ ಬಂಟ್ವಾಳ ತಾಲ್ಲೂಕುಗಳಲ್ಲಿ ವಿಶೇಷ ಆರ್ಥಿಕ ವಲಯಗಳು ಸ್ಥಾಪಿಸಲ್ಪಡುತ್ತಿವೆ

ಆ) ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 165 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಹಾಗೂ ಮೆ ಇನ್‌ಫೋಸಿಸ್ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 377 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಭಾರತ ಸರ್ಕಾರದಿಂದ ನಿರ್ದಿಷ್ಟ ಅನುಮೋದನೆ ದೊರಕಿರುತ್ತದೆ

ಮೆ ಬಿ ಎ ಟಿಕ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಬಂಟ್ವಾಳ ತಾಲ್ಲೂಕಿನಲ್ಲಿ 29 ಎಕರೆ ಪ್ರದೇಶದಲ್ಲಿ ಐಟಿ / ಐಟಿಇಎಸ್ ವಿಶೇಷ ಆರ್ಥಿಕ ವಲಯ ಹಾಗೂ ಮೆ ಮಂಗಳೂರು ಎಸ್‌ಇಜೆಡ್ ಲಿಮಿಟೆಡ್ ಇವರಿಗೆ

ಮಂಗಳೂರು ತಾಲ್ಲೂಕಿನಲ್ಲಿ 3300 ಎಕರೆ ಪ್ರದೇಶದಲ್ಲಿ ಮಲ್ಟಿ ಪ್ರಾಡಕ್ಟ್ ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಭಾರತ ಸರ್ಕಾರದ ತಾತ್ವಿಕ ಅನುಮೋದನೆ ದೊರಕಿರುತ್ತದೆ

ಇ) ಬಂಡವಾಳ ಹೂಡಿಕೆಗೆ ಈ ಕೆಳಕಂಡ ಸಂಸ್ಥೆಗಳು ಮುಂದೆ ಬಂದಿವೆ

ಅನುಮೋಧನೆ ಪಡೆದಿರುವ ಸಂಸ್ಥೆಗಳು

1) ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ

2) ಮೆ ಇನ್‌ಫೋಸಿಸ್

3) ಮೆ ಬಿ ಎ ಟೆಕ್ ಪಾರ್ಕ್ ಪ್ರೈ ಲಿ ಹಾಗೂ

4) ಮೆ ಮಂಗಳುರು ಎಸ್‌ಇಜೆಡ್ ಲಿಮಿಟೆಡ್

ಭಾರತ ಸರ್ಕಾರದಿಂದ ಅನುಮೋದನೆಗಾಗಿ ಬಾಕಿ ಇರುವ ಸಂಸ್ಥೆಗಳು

1) ಮೆ ಕಿನ್‌ಫೋಟೆಕ್ ಸಾಫ್ಟ್‌ವೇರ್ ಪ್ರೈ ಲಿಮಿಟೆಡ್,

2) ಮೆ ರೆನಸಾನ್ಸ್ ಡಿಸೈನ್ ಬಿಲ್ಡ್ ಪ್ರೈ ಲಿಮಿಟೆಡ್

ಈ) ರಾಜ್ಯ ಸರ್ಕಾರದ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಮೆ *ಇನ್‌ಫೋಸಿಸ್ ಹಾಗೂ ಮಂಗಳೂರು ಎಸ್‌ಇಜಡ್ ಲಿಮಿಟೆಡ್ ಇವರಿಗೆ ಭೂಸ್ವಾಧೀನ ಮಾಡಿಕೊಡುತ್ತದೆ ಹಾಗೂ ಭಾರತ ಸರ್ಕಾರದ ವಿಶೇಷ ಆರ್ಥಿಕ ವಲಯ ಕಾಯ್ದೆ 2005 ಹಾಗೂ ನಿಯಮಗಳು 2006ರನ್ವಯ ರಾಜ್ಯದ ತೆರಿಗೆಗಳ ವಿನಾಯಿತಿ ಹಾಗೂ ಸ್ಟಾಂಪ್ ಶುಲ್ಕ ಮನ್ನಾ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಕೇಂದ್ರ ಸರ್ಕಾರವು ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ನಿರ್ದಿಷ್ಟ / ತಾತ್ವಿಕ ಅನುಮೋದನೆಗಳನ್ನು ನೀಡುತ್ತದೆ ಹಾಗೂ ವಿಶೇಷ ಆರ್ಥಿಕ ವಲಯ ಕಾಯ್ದೆ 2005ರ ಪ್ರಕಾರ ಆದಾಯ ತೆರಿಗೆ ವಿನಾಯಿತಿ, ಕಸ್ಟಮ್ಸ್ ತೆರಿಗೆ ವಿನಾಯಿತಿ, ಎಕ್ಸೈಸ್ / ಸಿಎಸ್‌ಟಿ / ಸೇವಾ ತೆರಿಗೆ ವಿನಾಯಿತಿಗಳನ್ನು ನೀಡುತ್ತದೆ

ಅನುಬಂಧ – II

32 (84) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಆಶ್ರಯ ಮನೆ ಹಂಚಿಕೆ ಮಾಡಲು ಪ್ರಸಕ್ತ ಸಾಲಿನಲ್ಲಿ ಗುರಿ ನಿಗದಿಪಡಿಸಲಾಗಿದೆಯೇ , (ತಾಲ್ಲೂಕುವಾರು ವಿವರ ನೀಡುವುದು) ,